# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 132 (1201) |
| ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.03.2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಇಲಾಖೆ |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಸರ್ಕಾರಿ ಶಾಲೆ, ವಸತಿ ಶಾಲೆ ಹಾಗೂ ವಸತಿ ನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ; ಈ ಪೈಕಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಬರುವ ನಿಲಯಗಳ ಅಂಕಿ- ಅಂಶಗಳೇನು; (ಜಿಲ್ಲಾವಾರು ವಿವರ ನೀಡುವುದು);</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಸರ್ಕಾರಿ ಶಾಲೆ, ವಸತಿ ಶಾಲೆ ಹಾಗೂ ವಸತಿ ನಿಲಯಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ. ಅದರ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
<table>
<tr><th>ಕ್ರ. ಸಂ.</th><th>ಶಾಲೆಗಳ ಹೆಸರು</th><th>ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಸಂಖ್ಯೆ</th></tr>
<tr><td>1</td><td>ಸರ್ಕಾರಿ ಶಾಲೆ (ಶಾಲಾ ಶಿಕ್ಷಣ ಇಲಾಖೆ)</td><td>10</td></tr>
<tr><td>2</td><td>ವಸತಿ ಶಾಲೆ (ಕ್ರೈಸ್)</td><td>05</td></tr>
<tr><td>3</td><td>ವಿದ್ಯಾರ್ಥಿ ನಿಲಯ (ಸಮಾಜ ಕಲ್ಯಾಣ ಇಲಾಖೆ)</td><td>12</td></tr>
</table>
</td></tr>
<tr><td>ಆ)</td><td>ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಗೆ ಮೂಲ ಕಾರಣಗಳೇನು ಎಂಬ ಬಗ್ಗೆ ಸರ್ಕಾರ ಸಮೀಕ್ಷೆ ನಡೆಸಿದೆಯೇ; ಈ ಸಾವಿಗೆ ಒತ್ತಡದ ಜೀವನ, ರ್‍ಯಾಗಿಂಗ್ ಅಥವಾ ಮೂಲಭೂತ ಸೌಕರ್ಯಗಳ ಕೊರತೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳು ಪ್ರೇಮ ವೈಫಲ್ಯ, ವೈಯಕ್ತಿಕ, ಮಾನಸಿಕ ಖಿನ್ನತೆ ಹಾಗೂ ಆನ್ ಲೈನ್ ಜೂಜಾಟದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ವಿದ್ಯಾರ್ಥಿ ನಿಲಯಗಳಲ್ಲಿ ಸಂಭವಿಸಿರುವ ಆತ್ಮಹತ್ಯೆಯಡಿ ದಾಖಲಾದ ಪ್ರಕರಣಗಳಲ್ಲಿ ಯಾವುದೇ ರೀತಿಯ ಒತ್ತಡದ ಜೀವನ, ರ್‍ಯಾಗಿಂಗ್ ಅಥವಾ ಮೂಲಭೂತ ಸೌಕರ್ಯಗಳ ಕೊರತೆ ಮುಖ್ಯ ಕಾರಣವಾಗಿರುವುದಿಲ್ಲ. ಅದರಂತೆ, ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಎಲ್ಲಾ ನಿಲಯಾರ್ಥಿಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿರುತ್ತದೆ.<br><br>ಮುಂದುವರೆದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ವಿದ್ಯಾರ್ಥಿಗಳ ಸುರಕ್ಷತೆಯ ಹಿತದೃಷ್ಠಿಯಿಂದ ತೆಗೆದುಕೊಂಡಿರುವ ಕ್ರಮಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.</td></tr>
<tr><td>ಇ)</td><td>ವರದಿಯಾಗಿರುವಂತೆ 'ಕರ್ನಾಟಕ ಆತ್ಮಹತ್ಯೆ ತಡೆ ನೀತಿ-2025' ಅನ್ನು ಜಾರಿಗೆ ತರಲು ಸರ್ಕಾರ ಸಿದ್ಧತೆ ನಡೆಸಿದೆಯೇ; ಈ ನೀತಿಯ ಪ್ರಮುಖ ಉದ್ದೇಶಗಳು ಮತ್ತು ಅನುಷ್ಠಾನದ ಹಂತಗಳೇನು;</td><td>ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳ, ಅಲ್ಪಸಂಖ್ಯಾತರ ವಸತಿ ಶಾಲೆಗಳ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸುರಕ್ಷತೆಯ ಹಿತದೃಷ್ಠಿಯಿಂದ Karnataka Suicide Prevention Policy-2025 ಯ ಕರಡು ಸಿದ್ಧಪಡಿಸಲಾಗಿದ್ದು, ಅಂತಿಮ ಪ್ರಕ್ರಿಯೆಯಲ್ಲಿರುತ್ತದೆ.</td></tr>
</table>

| | | |
|---|---|---|
| ಈ) | ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಕಾಪಾಡಲು ಆಪ್ತ ಸಮಾಲೋಚಕರನ್ನು (Counselors) ನೇಮಕ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಈ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ? | ಶಾಲಾ ಶಿಕ್ಷಣ ಇಲಾಖೆಯ ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಕಸ್ತೂರ ಬಾ ಗಾಂದಿ ಬಾಲಿಕಾ ವಸತಿ ಶಾಲೆ /ವಸತಿ ನಿಲಯಗಳಲ್ಲಿ (KGBV) ಹಾಗೂ ಕರ್ನಾಟಕ ಕಸ್ತೂರ ಬಾ ಗಾಂಧಿ ಬಾಲಿಕಾ ವಸತಿ ನಿಲಯಗಳಲ್ಲಿ (KKGBV) ಗಳಲ್ಲಿ ಆಪ್ತ ಸಮಾಲೋಚಕರನ್ನು (Counselors) ನೇಮಕ ಮಾಡಿರುವುದಿಲ್ಲ. ಆದರೆ, ವಿದ್ಯಾರ್ಥಿನಿಯರ ಮಾನಸಿಕ ಆರೋಗ್ಯ ಕಾಪಾಡಲು ಹದಿಹರೆಯದ ಶಿಕ್ಷಣ ಆರೋಗ್ಯ ತಪಾಸಣೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮುಖ್ಯ ಶಿಕ್ಷಕರು ಹಾಗೂ ನಿಲಯ ಪಾಲಕರಿಗೆ ಆರೋಗ್ಯ ಇಲಾಖೆಯಿಂದ ಮಾರ್ಗದರ್ಶನ ನೀಡಲಾಗಿರುತ್ತದೆ.<br><br>ಶಾಲಾ ಶಿಕ್ಷಣ ಸಂಸ್ಥೆಗಳಲ್ಲಿ ಮಾನಸಿಕ ಆರೋಗ್ಯ ಸಂರಕ್ಷಣಾ ಮಾರ್ಗಸೂಚಿಗಳ ಅನುಷ್ಠಾನಕ್ಕಾಗಿ ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ 69 ಯುಪಿಸಿ 2024(E) ದಿನಾಂಕ:27.11.2025 ರಲ್ಲಿ ಅಂಶಗಳನ್ನು ಹೊರಡಿಸಲಾಗಿದ್ದು, ಅದರಂತೆ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.<br><br>ಕರ್ನಾಟಕ ಆತ್ಮಹತ್ಯೆ ತಡೆ ನೀತಿ 2025ರಂತೆ 100ಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಪ್ರತಿಯೊಂದು ಸಂಸ್ಥೆಯು ಕನಿಷ್ಠ ಒಬ್ಬ ಅರ್ಹ ಮನೋವೈದ್ಯರನ್ನು ಕೌನ್ಸಿಲರ್ ಅಥವಾ ಸಮಾಜ ಸೇವಕರನ್ನು ನೇಮಿಸಬೇಕೆಂದಿರುತ್ತದೆ. ಆದರಂತೆ, ಆದೇಶ ಸಂಖ್ಯೆ:ಸಕಇ 136 ಪಕವಿ 2023 ದಿನಾಂಕ:31.08.2023ರಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಇಲಾಖಾ ನಿಲಯಗಳಲ್ಲಿ ಪ್ರತಿವಾರ ಮಹಿಳಾ ಸಮಾಲೋಚಕಿ/ಮಹಿಳಾ ವೈದ್ಯರ ಮೂಲಕ ಸಮಾಲೋಚನೆ ಮಾಡಲು ಆದೇಶಿಸಲಾಗಿದೆ. |

SWD/90/MDS/2026

(ಡಾ: ಹೆಚ್.ಸಿ ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು.

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ತಪ್ಪಸ್ಸನ್ನಪ್ಪ ಕಮಕನೂರು (ವಿಧಾನಸಭಾ ಕ್ಷೇತ್ರ) ಇವರು ಕೇಳಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 132(1201) ಗೆ ಉತ್ತರಿಸುವ ಕುರಿತು.

| ಕ್ರ. ಸಂ. | ಜಿಲ್ಲೆ | ಬ್ಲಾಕ್ | ವಿದ್ಯಾರ್ಥಿಯ ಹೆಸರು | ತರಗತಿ | ವರ್ಷ (2023-24, 2024-25, 2022-26) | ಸರ್ಕಾರಿ ಶಾಲೆಯ ಹೆಸರು | U DISE CODE | ಶಾಲೆಯ ವಿಧ/ ಪ್ರಾಥಮಿಕ/ ಪ್ರೌಢ ಶಾಲೆ | ಶಾಲೆಯ ವಿಧ | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಶಿವಮೊಗ್ಗ | ತೀರ್ಥಹಳ್ಳಿ | ಇಂಚನ | 7ನೇ ತರಗತಿ | 2024-25 | ಸ.ಹಿ.ಪ್ರಾಥಮಿಕ ಶಾಲೆ, ಬನವಾಸಿ | 29150721001 | ಸರ್ಕಾರಿ ಪ್ರಾಥಮಿಕ ಶಾಲೆ | ವಸತಿ ರಹಿತ | ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ |
| 2 | ಚಿಕ್ಕಮಗಳೂರು | ಕೊಪ್ಪ | ಕು.ಪ್ರಕೃತಿ | 10ನೇ ತರಗತಿ | 2025-27 | ಕೆ.ಪಿ.ಎಸ್. ಪ್ರೌಢಶಾಲೆ,ಕೊಪ್ಪ | 29170208601 | ಸರ್ಕಾರಿ ಪ್ರೌಢ ಶಾಲೆ | ವಸತಿ ರಹಿತ | |
| 3 | ಚಿಕ್ಕಮಗಳೂರು | ಕೊಪ್ಪ | ಕು.ಸುಪ್ರಿತಾ | 7ನೇ ತರಗತಿ | 2025-27 | ಸ.ಹಿ.ಪ್ರಾಥಮಿಕ ಶಾಲೆ, ಶಾಂತಿ ಗ್ರಾಮ | 29170206903 | ಸರ್ಕಾರಿ ಪ್ರಾಥಮಿಕ ಶಾಲೆ | ವಸತಿ ರಹಿತ | |
| 4 | ಚಿಕ್ಕಮಗಳೂರು | ಬೀರೂರು | ಕು.ನಂದಿತ | 8ನೇ ತರಗತಿ | 2024-25 | ಸ.ಪ್ರೌ.ಶಾಲೆ, ಲಿಂಗದಹಳ್ಳಿ | 29170800606 | ಸರ್ಕಾರಿ ಪ್ರೌಢ ಶಾಲೆ | ವಸತಿ ರಹಿತ | |
| 5 | ಉಡುಪಿ | ಉಡುಪಿ | ಭರಮವ್ವ | 10ನೇ ತರಗತಿ | 2025-26 | ಸ.ಪೂ.ಕಾಲೇಜು, (ಪ್ರೌ.ಶಾ ವಿಭಾಗ), ಉಡುಪಿ | 29160212702 | ಸರ್ಕಾರಿ ಪ್ರೌಢ ಶಾಲೆ | ವಸತಿ ರಹಿತ | ಕೌಟುಂಬಿಕ ಕಲಹದಿಂದ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. |
| 6 | ಉಡುಪಿ | ಉಡುಪಿ | ಸುಮೀಕ್ಷಾ | 10ನೇ ತರಗತಿ | 2025-26 | ಕೆ.ಪಿ.ಎಸ್., ಹಿರಿಯಡ್ಕ | 29160202013 | ಸರ್ಕಾರಿ ಪ್ರೌಢ ಶಾಲೆ | ವಸತಿ ರಹಿತ | |
| 7 | ಉಡುಪಿ | ಬ್ರಹ್ಮಾವರ | ಧನುಷ್ | 9ನೇ ತರಗತಿ | 2025-26 | ಸ.ಪ್ರೌ, ನಾಲ್ಕೂರು | 2916054203 | ಸರ್ಕಾರಿ ಪ್ರೌಢ ಶಾಲೆ | ವಸತಿ ರಹಿತ | |
| 8 | ಹಾಸನ | ಆಲೂರು | ಸನ್ನಿಧಿ ಎಸ್.ಯು | 10ನೇ ತರಗತಿ | 2025-26 | G.J.C, ಆಲೂರು | 29230100121 | ಸರ್ಕಾರಿ ಪ್ರೌಢ ಶಾಲೆ | ವಸತಿ ರಹಿತ | ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ |
| 9 | ಬಾಗಲಕೋಟೆ | ಬಾಗಲಕೋಟೆ | ಕು.ದಿವ್ಯಾ ಶಿವಪ್ಪ ಬಾರಕೇರ | 9ನೇ ತರಗತಿ | 2024-25 | ಸ.ಪ್ರೌ.ಶಾಲೆ, ಕದಾಂಪೂರ ಪು.ಕೇ. | 29020204602 | ಸರ್ಕಾರಿ ಪ್ರೌಢ ಶಾಲೆ | ವಸತಿ ರಹಿತ | ಮನೆಯಲ್ಲಿ ವಿದ್ಯಾರ್ಥಿ ಆತ್ಮಹತ್ಯೆ ಮಾಡಿ ಕೊಂಡಿರುತ್ತಾರೆ |
| 10 | ಯಾದಗಿರಿ | ವಡಗೇರ | ಪವನ ತಂದೆ ಮಲ್ಲಪ್ಪ | 9ನೇ ತರಗತಿ | 2025-26 | ಸರ್ಕಾರಿ ಪ್ರೌಢ ಶಾಲೆ, ವಡಗೇರ | 29330714211 | ಸರ್ಕಾರಿ ಪ್ರೌಢ ಶಾಲೆ | ವಸತಿ ರಹಿತ | ದಿನಾಂಕ: 21-01-2026 ರಂದು ವಡಗೇರ ಪೊಲೀಸ್ ಠಾಣೆಯಲ್ಲಿ ಎಫ್. ಐ.ಆರ್. ದಾಖಲಾಗಿದೆ. ವಿಚಾರಣೆ ಪ್ರಗತಿಯಲ್ಲಿದೆ. |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 132 (1201) ಕ್ಕೆ ಅನುಬಂಧ-1**

| Sl. No | District | School Code | School category | School Address | Death student name | Male/Female | Standard | Death Year | Reason of Death |
|---|---|---|---|---|---|---|---|---|---|
| 1 | CHIKKAMAGA LURU | 124 | SC | MDRS-Haranduru koppa | Amulya N M | Female | 9th | 2023 | Suicide - Hanging |
| 2 | CHIKKAMAGA LURU | 124 | SC | MORARJI DESAI RESIDENTIAL SCHOOL HARANDUR | SHAMITHA S | Female | 9th | 2025 | Suicide - Hanging |
| 3 | RAICHUR | 495 | ST | KRCRS-SASVIGERA, DEVADURGA, | PAVITHRA | Female | 10th | 2023 | Drank Pesticides |
| 4 | Tumkuru | 86 | SC | MDRS (SC_86) Narasapura Hebburu Tumkuru | Likhit G J | Male | 8th | 2025 | HANG TO FAN |
| 5 | KALABURAGI | 636 | SC | IGRS MUDHOL, SEDAM TALUK | NARAYANA RATHOD | Male | 7th | 2025 | Suicide by Hang |

ಅನುಬಂಧ-1

ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕಳೆದ 03 ವರ್ಷಗಳ ಆತ್ಮಹತ್ಯೆ ಪ್ರಕರಣಗಳು (ಜಿಲ್ಲಾವಾರು)

| ಕ್ರ. ಸಂ. | ಜಿಲ್ಲೆಯ ಹೆಸರು | ಆತ್ಮಹತ್ಯೆ ಮಾಡಿಕೊಂಡಿರುವ ಸಂಖ್ಯೆ | ಆತ್ಮಹತ್ಯೆಗೆ ಮೂಲ ಕಾರಣ |
|---|---|---|---|
| 1 | ಚಿತ್ರದುರ್ಗ | 01 | ಪ್ರೇಮ ವೈಫಲ್ಯದಿಂದ ವಿದ್ಯಾರ್ಥಿನಿಲಯದಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ |
| 2 | ದಾವಣಗೆರೆ | 01 | ವೈಯಕ್ತಿಕ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ |
| 3 | ತುಮಕೂರು | 01 | ವೈಯಕ್ತಿಕ ಕಾರಣದಿಂದ ವಿದ್ಯಾರ್ಥಿನಿಲಯದಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ |
| 4 | ಶಿವಮೊಗ್ಗ | 01 | ವೈಯಕ್ತಿಕ ಕಾರಣದಿಂದ ವಿದ್ಯಾರ್ಥಿನಿಲಯದಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ |
| 5 | ಚಾಮರಾಜನಗರ | 01 | ವೈಯಕ್ತಿಕ ಕಾರಣದಿಂದ ವಿದ್ಯಾರ್ಥಿನಿಲಯದಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿರುತ್ತಾರೆ |
| 6 | ಬೆಳಗಾವಿ | 02 | ➢ ಪ್ರೇಮ ವೈಫಲ್ಯದಿಂದ ವಿದ್ಯಾರ್ಥಿನಿಲಯದಲ್ಲಿ ನೇಣು ಹಾಕಿ ಕೊಂಡು ಮೃತಪಟ್ಟಿರುತ್ತಾರೆ.<br>➢ ಮಾನಸಿಕ ಖಿನ್ನತೆಯಿಂದ ವಿದ್ಯಾರ್ಥಿನಿಲಯದಲ್ಲಿ ನೇಣು ಹಾಕಿ ಕೊಂಡು ಮೃತಪಟ್ಟಿರುತ್ತಾರೆ |
| 7 | ಧಾರವಾಡ | 01 | ಜೂಜಾಟದಿಂದ ವಿದ್ಯಾರ್ಥಿನಿಲಯದಲ್ಲಿ ನೇಣು ಹಾಕಿ ಕೊಂಡು ಮೃತಪಟ್ಟಿರುತ್ತಾರೆ |
| 8 | ಹಾವೇರಿ | 02 | ➢ ಮಾನಸಿಕ ಖಿನ್ನತೆಯಿಂದ ನೇಣು ಹಾಕಿ ಕೊಂಡು ಮೃತಪಟ್ಟಿರುತ್ತಾರೆ<br>➢ ಮಾನಸಿಕ ಖಿನ್ನತೆಯಿಂದ ವಿದ್ಯಾರ್ಥಿನಿಲಯದಲ್ಲಿ ನೇಣು ಹಾಕಿ ಕೊಂಡು ಮೃತಪಟ್ಟಿರುತ್ತಾರೆ |
| 9 | ರಾಯಚೂರು | 02 | ➢ ಸಿಂಧನೂರು ನಗರದ ರೈಲ್ವೆ ಹಳಿಗೆ ಬಿದ್ದು ಮೃತಪಟ್ಟಿರುತ್ತಾರೆ.<br>➢ ಪ್ರೇಮ ವೈಫಲ್ಯದಿಂದ ವಿದ್ಯಾರ್ಥಿನಿಲಯದಲ್ಲಿ ನೇಣು ಹಾಕಿ ಕೊಂಡು ಮೃತಪಟ್ಟಿರುತ್ತಾರೆ. |

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1201ಗೆ ಅನುಬಂಧ-02**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪುತ್ತಿರುವ ಬಗ್ಗೆ ಸಮೀಕ್ಷೆ ನಡೆಸಿ, ವರದಿ ಸಲ್ಲಿಸುವಂತೆ Institute for Social & Economic Change (ISEC), Nagarabhavi, Bangalore ರವರಿಗೆ ದಿನಾಂಕ: 30.09.2024 ರಂದು ಕಾರ್ಯನಿರ್ವಾಹಕ ನಿರ್ದೇಶಕರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರಿಂದ ಪತ್ರ ಬರೆಯಲಾಗಿರುತ್ತದೆ.

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳ ಸುರಕ್ಷತೆಯ ಹಿತದೃಷ್ಟಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.**

1. ವಸತಿ ಶಾಲೆ/ಕಾಲೇಜುಗಳಲ್ಲಿ ಪೊಲೀಸ್, ಅಗ್ನಿ ಶಾಮಕ, ಸಮಾಜ ಕಲ್ಯಾಣ ಇಲಾಖೆ ಮತ್ತು ಮಕ್ಕಳ ಸಹಾಯವಾಣಿ ಸಂಖ್ಯೆಗಳನ್ನು ಶಾಶ್ವತ ಫಲಕದಲ್ಲಿ ಪ್ರದರ್ಶಿಸಲು ದಿನಾಂಕ:02.12.2025 ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

2. ವಸತಿ ಶಾಲೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವೈದ್ಯಕೀಯ ತಪಾಸಣೆ ನಡೆಸಲು ದಿನಾಂಕ:22.09.2025 ರಂದು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ನ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮತ್ತು ವಸತಿ ಶಾಲೆ/ಕಾಲೇಜುಗಳ ಪ್ರಾಂಶುಪಾಲರಿಗೆ ಮತ್ತು ಸಿಬ್ಬಂದಿಗಳಿಗೆ ವಿವರವಾದ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

3. ವಿದ್ಯಾರ್ಥಿಗಳ ಸಮಗ್ರ ಶೈಕ್ಷಣಿಕ, ಮಾನಸಿಕ, ಶಾರೀರಿಕ, ನೈತಿಕ ಅಭಿವೃದ್ಧಿಗಾಗಿ ಪ್ರತಿ 20 ರಿಂದ 25 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರನ್ನು "ಮಾರ್ಗದರ್ಶಕ-ಪೋಷಕ ಶಿಕ್ಷಕ (Mentor com parent Teacher)" ಎಂದು ಹಂಚಿಕೆ ಮಾಡಿ, ನಿಯೋಜಿಸಿ ಅನುಷ್ಠಾನಗೊಳಿಸಲು ಎಲ್ಲಾ ವಸತಿ ಶಾಲೆ/ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸುತ್ತೋಲೆಯ ಮೂಲಕ ತಿಳಿಸಲಾಗಿದೆ.

4. ಮಕ್ಕಳ ಮತ್ತು ಮಹಿಳಾ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಿಂದ ಹೊರಡಿಸಿರುವ ಕರ್ನಾಟಕ ರಾಜ್ಯ ಮಕ್ಕಳ ನೀತಿ -2016 ಪರಿಷ್ಕೃತ-2023ರನ್ವಯ ವಸತಿ ಶಾಲೆ/ಕಾಲೇಜುಗಳಲ್ಲಿ ಮಹಿಳೆಯ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) 2013ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ದಿನಾಂಕ: 22.09.2025 ರಂದು ನಿರ್ದೇಶನ ನೀಡಲಾಗಿದೆ.

5. ಸರ್ಕಾರದ ಆದೇಶ ಸಂಖ್ಯೆ:ಸಕಇ 258 ಎಂಡಿಎಸ್ 2024 ದಿನಾಂಕ: 04.10.2024 ರಲ್ಲಿ ತಹಶೀಲ್ದಾರ್ ರವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮಟ್ಟದ ವಿದ್ಯಾರ್ಥಿಗಳ ಸುರಕ್ಷಾ ಮೇಲ್ವಿಚಾರಣಾ ಸಮಿತಿ ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ವಿದ್ಯಾರ್ಥಿಗಳ ಮೇಲುಸ್ತುವಾರಿ ನಿರ್ವಹಣಾ ಸಮಿತಿ ರಚಿಸಲಾಗಿದೆ.

6. ಸರ್ಕಾರದ ಆದೇಶ ಸಂಖ್ಯೆ:ಸಕಇ 315 ಎಂಡಿಎಸ್ 2022 ದಿನಾಂಕ: 03.11.2022ರಂದು ಹೆಣ್ಣು ಮಕ್ಕಳ ವಸತಿ ಶಾಲೆಗಳಲ್ಲಿ ಮಹಿಳಾ ನಿಲಯಪಾಲಕರನ್ನು ನಿಯೋಜಿಸಲು ಸೂಚಿಸಲಾಗಿದ್ದು, ಅದರಂತೆ ಖಾಯಂ ನಿಲಯಪಾಲಕರ ಹುದ್ದೆಗಳು ಖಾಲಿ ಇದ್ದಲ್ಲಿ ಅಂತಹ ಹುದ್ದೆಗಳಿಗೆ ಆಯಾಯಾ ವಸತಿ ಶಾಲೆಯ ಹಿರಿಯ ಮಹಿಳಾ ಶಿಕ್ಷಕರನ್ನು ನಿಲಯಪಾಲಕರ ಹುದ್ದೆಗೆ ಹೆಚ್ಚುವರಿ ಪ್ರಭಾರದಲ್ಲಿರಿಸಲು ಸೂಚಿಸಲಾಗಿದೆ.

ಮುಂದುವರೆದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಕಇ- ಎಂಡಿಎಸ್/448/2022 ದಿನಾಂಕ: 10.03.2025 ರಲ್ಲಿ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಗಳಲ್ಲಿ ಹೆಣ್ಣು ಮಕ್ಕಳ ವಸತಿ ಶಾಲೆಗಳಲ್ಲಿ ಮಹಿಳಾ ನಿಲಯಪಾಲಕರನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ತಿದ್ದುಪಡಿ ಮಾಡಿಕೊಳ್ಳಲಾಗಿರುತ್ತದೆ.

7. ವೃತ್ತ ಆರಕ್ಷಕ ನಿರೀಕ್ಷಕರು ತಮ್ಮ ವ್ಯಾಪ್ತಿಯ ವಸತಿ ಶಾಲೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ವಿದ್ಯಾರ್ಥಿನಿಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಗಟ್ಟಲು ತೆಗೆದುಕೊಳ್ಳಸಬಹುದಾದ ಕ್ರಮಗಳ ಬಗ್ಗೆ ಅರಿವು ಮೂಡಿಸಲು ಆಯಾ ವ್ಯಾಪ್ತಿಯ ವೃತ್ತ ಆರಕ್ಷಕ ನಿರೀಕ್ಷಕರನ್ನು ತಪಾಸಣಾ ಅಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.